



ಕರಾವಳಿಯ ಎರಡು ನದಿಗಳು ಸೇರುವ ಸಂಗಮ ಸ್ಥಾನದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜು ಅದು. ಪ್ರತಿದಿನ ಸಂಜೆ ನಾಟಕ ತರಬೇತಿ, ಭಾಗವಹಿಸಿದ ಹದಿನೆಂಟು ವಿದ್ಯಾರ್ಥಿಗಳ ಪೈಕಿ ಅಷ್ಟೂ ಮಂದಿ ಕೂಡ ಬೇರೆ ಬೇರೆ ಹಳ್ಳಿಯಿಂದ ಕಾಲೇಜಿಗೆ ಬರುವ ಗ್ರಾಮ್ಯಮಕ್ಕಳು. ಬಹುತೇಕರು ಹಳ್ಳಿ ಹುಡುಗಿಯರು. ಅವತ್ತು ಕೊನೆಯ ಪ್ರಾಕ್ಟೀಸ್. ಮರುದಿನ ಪುತ್ತೂರಿನ ಬಾಲವನದಲ್ಲಿ 'ಒಪ್ಪಿಗೆ ಇಲ್ಲ' ಎಂಬ ಆ ನಾಟಕದ ಪ್ರದರ್ಶನವಿತ್ತು.

ಮಧ್ಯಾಹ್ನ ತರಗತಿ ಮಾಡುತ್ತಿದ್ದಲ್ಲಿಗೆ ಓಡಿ ಬಂದ ಆ ಹುಡುಗಿ, 'ಸರ್ ನಾನು ಇವತ್ತು ಪ್ರಾಕ್ಟೀಸಿಗೆ ಬರಲಾಗುವುದಿಲ್ಲ, ಜೋರು ಮಳೆ ಬರುತ್ತಿದೆ. ಇವತ್ತು ಗ್ಯಾರಂಟಿ ಇಲ್ಲಿ ಸಂಗಮವಾಗುತ್ತದೆ. ನಾನು 20 ಕಿಲೋಮೀಟರ್ ಬಸ್ಸಲ್ಲಿ ಹೋಗಿ, ನೇತ್ರಾವತಿಯನ್ನು ತೆಪ್ಪದಲ್ಲಿ ದಾಟಿ ಅಲ್ಲಿಂದ ಮೂರು ಮೈಲು ನಡೆದು ಮನೆ ಸೇರಬೇಕು. ಸಂಜೆವರೆಗೆ ನಿಂತರೆ ಖಂಡಿತ ನನಗೆ ಊರು ಸೇರುವುದು ಸಾಧ್ಯವಿಲ್ಲ, ನನ್ನನ್ನು ಬಿಡಿ ಸರ್' ಅಂದಾಗ ನಾನು ಸಹಜವಾಗಿ ಬೆಚ್ಚಿಬಿದ್ದೆ. ಉಪ್ಪಿನಂಗಡಿಯಲ್ಲಿ ಅವತ್ತು ಎರಡು ನದಿಗಳಲ್ಲಿ ನೀರು ಏರುತ್ತಲೇ ಇತ್ತು. ಆಕೆ ಹೇಳಿದ ಹಾಗೆ ಸಂಗಮವಾಗುವ ಸಾಧ್ಯತೆಯಿತ್ತು. ಆ ಹುಡುಗಿ ನಾಟಕದೊಳಗೆ ನಾಯಕಿ ಪಾತ್ರ ಮಾಡುವವಳಾಗಿದ್ದರೂ ನಿಲ್ಲಿಸುವುದು ಬೇಡ ಎಂದು ಬೇಗ ಮನೆಗೆ ಕಳುಹಿಸಿಕೊಟ್ಟೆ. 'ಪೇಟೆ ಕೇಂದ್ರಿತ ಮಕ್ಕಳಿಗಿಂತ ಕಲೆ, ಸಾಹಿತ್ಯ, ಸಂಗೀತ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ಇರುವುದು ನಿಮ್ಮಂಥ ಹಳ್ಳಿ ಕೇಂದ್ರಿತ ಬಡ ಮಕ್ಕಳಲ್ಲಿ' ಎಂದು ಹೇಳಿ ಅವತ್ತು ಕ್ಲಾಸ್ ಮುಗಿಸಿ ಹೊರಗಡೆ ಬಂದೆ.

ವಾರ ಬಿಟ್ಟು ಒಂದು ದಿನ ಅದೇ ತರಗತಿಯಲ್ಲಿ ಮಕ್ಕಳ ಕಷ್ಟ, ಸಮಸ್ಯೆಗಳನ್ನು ಅರಿಯುವ ಉದ್ದೇಶದಿಂದ ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ಅಲ್ಲೇ ಬಿಟ್ಟು ಎಲ್ಲರ ಕೈಗೂ ಒಂದೊಂದು ಖಾಲಿ ಹಾಳೆ ಕೊಟ್ಟು ಬರೆಯಲು ವಿನಂತಿಸಿದೆ. 'ದಯವಿಟ್ಟು ನೀವು ಈ ಖಾಲಿ ಹಾಳೆಯ ಮೇಲೆ ನಿಮ್ಮ ಹೆಸರನ್ನಾಗಲೀ ಊರನ್ನಾಗಲೀ ಬರೆಯುವುದು ಬೇಡ. ಬದಲಾಗಿ ವೈಯಕ್ತಿಕವಾಗಿ ನೀವು ಮನೆಯಲ್ಲಿ, ಕಾಲೇಜು ಹಾದಿಯಲ್ಲಿ ಎದುರಿಸುವ ಕೌಟುಂಬಿಕ, ಸಾಮಾಜಿಕ, ದೈಹಿಕ, ಶೈಕ್ಷಣಿಕ ಸಮಸ್ಯೆಗಳನ್ನು ಮುಕ್ತವಾಗಿ ಬರೆಯಿರಿ. ಎಷ್ಟೋ ಸಲ ಮೌಖಿಕವಾಗಿ ಹೇಳಲಾಗದ್ದನ್ನು ಬರೆಯಲು ಸಾಧ್ಯವಿದೆ. ಬಹುದೂರಗಳಿಂದ ದುಡಿದು ಕಾಲೇಜಿನ ಶುಲ್ಕವನ್ನು ತಾವೇ ಸಂಪಾದಿಸಿ ತುಂಬುವ, ಶ್ರಮಿಸುವ ಮಕ್ಕಳು ನೀವು. ಯಾವ ಸಂಕೋಚವೂ ಇಲ್ಲದೆ ಎಲ್ಲವನ್ನು ಬರೆಯಿರಿ. ನಿಮ್ಮ ಗಂಭೀರ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಯತ್ನವನ್ನು ಮಾಡಲು ಸಾಧ್ಯವೂ ನೋಡುವ' ಎಂದೆ.

ಇಷ್ಟೆಲ್ಲಾ ಮಾತನಾಡುವಾಗ ನನ್ನ ದೃಷ್ಟಿ ಇದ್ದದ್ದು ನೇತ್ರಾವತಿ ನದಿಯನ್ನು ತೆಪ್ಪದಲ್ಲಿ ದಾಟಿ ಬರುವ ಸಾಹಿತ್ಯ ಸಂಸ್ಕೃತಿಯ ಅತೀವ ಆಸಕ್ತಿ ಇರುವ ಆ ನಾಟಕದ ಹುಡುಗಿ ರಮ್ಯಾಳ ಮೇಲೆ. ಆಕೆ ಬರೆಯುತ್ತಾ ಬರೆಯುತ್ತಾ ನನ್ನಿಂದ ಮತ್ತೊಂದು ಹಾಳೆಯನ್ನು ಇಸಿದುಕೊಂಡಳು. ಎಲ್ಲರ ಬರವಣಿಗೆಯನ್ನು ಕಟ್ಟುಕಟ್ಟಿ ಬ್ಯಾಗಿಗೆ ಹಾಕಿ, ಸಂಜೆ ಮನೆಯಲ್ಲಿ ಬಿಡಿಸಲು, ಓದಲು ಕಾತರನಾಗಿದ್ದೆ. ಸರ್ ನಾವು ಮೂರು ಜನ ಮಕ್ಕಳು. ನಾನು ದೊಡ್ಡವಳು, ಕಾಲೇಜಿನಿಂದ ಬಂದ ಮೇಲೆ ಸಂಜೆ ಅಮ್ಮನೊಂದಿಗೆ ಸೇರಿ ಬೀಡಿ ಕಟ್ಟುತ್ತೇನೆ. ಎಲೆ ಕತ್ತರಿಸುವ, ಸುತ್ತಿದ ಬೀಡಿಗೆ ನೂಲು ಹಾಕುವ ಕೆಲಸವನ್ನು ತಂಗಿ ತಮ್ಮ ಮಾಡುವುದಿದೆ. ಎಷ್ಟೇ ಬೀಡಿ ಕಟ್ಟಲಿ ವಾರಕ್ಕೆ ಬರುವ ಆದಾಯ ಒಂದು ಸಾವಿರಕ್ಕಿಂತ ಹೆಚ್ಚಿಲ್ಲ. ಅದನ್ನೆಲ್ಲ ನನ್ನ ಅಪ್ಪನ ಕುಡಿತಕ್ಕ ಕೊಡದಿದ್ದರೆ ಅಮ್ಮನಿಗೆ ಬಡಿದು ನಮ್ಮನೆಲ್ಲ ಹೆದರಿಸಿ ಹಣ ಕಿತ್ತು ಮನೆ ಬಿಡುತ್ತಾರೆ. ಮನೆಯ ಮುಳಿ ಮಾಡು ಸೋರುತ್ತಿದೆ. ಕಂಬಗಳಿಗೆ ಗೆದ್ದಲು ಹಿಡಿದಿದೆ. ಯಾವುದೇ ಕ್ಷಣದಲ್ಲಿ ಮನೆ ಬೀಳುವ ಸಾಧ್ಯತೆಯೂ ಇದೆ. ಕುಡಿದು ಬಂದ ಅಪ್ಪನಿಂದ ನೆಮ್ಮದಿ ಇಲ್ಲ. ಬೈದಾಟ ಬಡಿದಾಟ. ಪಕ್ಕದ ಮನೆಯಲ್ಲಿರುವ ಮಾವ ಅತ್ತೆ ನಮ್ಮನ್ನೆಲ್ಲ ಅನುಮಾನದಿಂದ ನೋಡುತ್ತಾರೆ. ಕುಡಿದು ಬರುವ ಕಾರಣಕ್ಕೋ ಏನೋ ಇಡೀ ಊರೇ ನಮ್ಮನ್ನು ಕೆಟ್ಟ ದೃಷ್ಟಿಯಿಂದ ಕಾಣುತ್ತದೆ. ಈ ಎಲ್ಲಾ ಕಾರಣಕ್ಕೆ ಒಂದು ದಿನ ಇದೇ ಅಪ್ಪನನ್ನು ಕೈಯಾರೆ ಸಾಯಿಸಬೇಕೆಂದು ಅಮ್ಮನಿಗೆ ಗೊತ್ತಿಲ್ಲದೆ ಜಿರಳೆಯ ಔಷಧಿಯನ್ನು ಗಂಜಿಗೆ ಸೇರಿಸಿ ನಾನೇ ಕೊಟ್ಟಿದ್ದೇನೆ. ತಲೆ ತಿರುಗಿ ಬಿದ್ದಾಗ ಆಸ್ಪತ್ರೆಗೆ ಸೇರಿಸಿದ್ದೂ ಇದೆ. ಎರಡು ಬಾರಿ ಮದ್ಯವರ್ಜನ ಶಿಬಿರಕ್ಕೆ ಸೇರಿಸಿದ್ದೂ ಆಯಿತು. ನಾವು ದುಡಿದದ್ದೆಲ್ಲ ಅವರ ಕುಡಿತಕ್ಕೆ ವ್ಯಯವಾಗುವುದರಿಂದ ಎಷ್ಟೋ ಬಾರಿ ತೆಪ್ಪದಲ್ಲಿ ನದಿ ದಾಟುವಾಗ ಅದೇ ನೀರಿಗೆ ಬಿದ್ದು ಸಾಯಬೇಕು ಎಂದು ನಾನು ನಿರ್ಧರಿಸಿದ್ದು ಅದನ್ನು ಮುಂದೂಡಿದ್ದು ಎಲ್ಲವೂ ಆಯಿತು. ನಾಟಕ ಪ್ರಾಕ್ಟೀಸ್‌ಗೆ ಸೇರಿದ ಮೇಲೆ ಸಂಜೆ ಮನೆ ಸೇರುವುದು ತಡವಾಗುತ್ತಿದೆ, ಕಟ್ಟುವ ಬೀಡಿಯ ಪ್ರಮಾಣ ಕಡಿಮೆಯಾಗುತ್ತದೆ ಎಂದು ಅಮ್ಮನ ಕಿರಿಕಿರಿ ಬೇರೆ. ಊರು ಹೆಸರಿಲ್ಲದ ಆ ಹಾಳೆಯ ಬರಹ ನಾಟಕದ ನಾಯಕಿ ರಮ್ಯಾಳದ್ದೇ ಎಂದು ತಿಳಿಯಲು ನನಗೆ ಕಷ್ಟವಾಗಿರಲಿಲ್ಲ.

ತರಗತಿಯ ಮಕ್ಕಳೆಲ್ಲರೂ ಬರೆದ ಒಟ್ಟು ಅಭಿಪ್ರಾಯಗಳ ಮೊತ್ತ ನನ್ನನ್ನು ದಂಗುಬಡಿಸಿತ್ತು. ಭಾನುವಾರದ ರಜೆಗಳಲ್ಲಿ ಯಾವುದೋ ಮನೆಗೆ ಚಾಕರಿಗೆ ಹೋಗುವವರು, ಪಕ್ಕದ ನರ್ಸರಿಗೆ ಹೋಗಿ ತೊಟ್ಟೆ(ಪ್ಲಾಸ್ಟಿಕ್ ಕವರ್)ಗೆ ಮಣ್ಣು ತುಂಬಿಸಿ ಬರುವವರು, ಕೃಷಿಕರ ಮನೆಗೆ ಹೋಗಿ ಅಡಿಕೆ ಸುಲಿದು ಅಂಗೈಯಲ್ಲಿ ಗುಳ್ಳೆ ಎಬ್ಬಿಸಿಕೊಂಡವರು, ಬಸ್ಸಲ್ಲಿ ಬರುವಾಗ ಪಕ್ಕದ ಸೀಟಲ್ಲಿ ಕೂತವರು ಕೊಡುವ ಕಿರುಕುಳಗಳನ್ನು ಸಹಿಸಿಕೊಂಡವರು, ಮನೆಯಲ್ಲಿ ಇರುವ ಚಿಕ್ಕಪ್ಪ ರಾತ್ರಿ ಕೊಡುವ ದೈಹಿಕ ಹಿಂಸೆ... ಹೀಗೆ ಸಾಲು ಸಾಲು ನೋವು ಸಂಕಟ ಸಮಸ್ಯೆಗಳೆಲ್ಲ ಮುಖ್ಯವಾಗಿ ಆ ಬಿಳಿ ಹಾಳೆಗಳಲ್ಲಿ ಅಚ್ಚಾಗಿದ್ದವು. ಅವೆಲ್ಲವೂ ನನ್ನನ್ನು ಅವರು ನಂಬಿಕೊಂಡ ಪ್ರಮಾಣದ ಆಧಾರದಲ್ಲಿ ಬರೆಯಲ್ಪಟ್ಟಿದ್ದವು. ಮೇಷ್ಟ್ರಿಗೆ ಗೊತ್ತಾಗಿ ಬಿಟ್ಟರೆ ಬೇರೆಯವರಿಗೆ ಅವರು ಹೇಳಿದರೆ ಅವಮಾನ ಎನ್ನುವ ಕಾರಣಕ್ಕಾಗಿ

